ಮಕ್ಕಳಿಗಾಗಿ ಬೈಬಲ್
ಅರ್ಪಿಸುವ



# ಗಿದ್ಯೋನನ ಸಣ್ಣ ಸೈನ್ಯ

ಬರಹಗಾರರು: Edward Hughes

ಚಿತ್ರಲೇಖಕರು: Janie Forest

ಅಳವಡಿಸುವವರು: Ruth Klassen

ಪದ್ಮಾ ಸೈಲೇಸ್: Vinay Shirol

ತಯಾರಕರು: Bible for Children
www.M1914.org

©2015 Bible for Children, Inc.
ಅನುಮತಿ: ಈ ಕಥೆಯನ್ನು ಉಪಯೋಗಿಸುವದಕ್ಕೆ ಮತ್ತು ಮುದ್ರಣಹಾಕುವದಕ್ಕೆ ನಿಮಗೆ ಅನುಮತಿ ಇರುವದು. ಆದರೆ, ಇದನ್ನು ನೀವು ಯಾವ ಕಾರಣಕ್ಕಾಗಿಯೂ ಮಾರಾಟಮಾಡಬಾರದು.



ಯಹೋಶವನು
ಸತ್ತ ನಂತರ
ಇಸ್ರಾಯೆಲ್ಯರು
ದೇವರಿಗೆ
ಅವಿಧೇಯರಾಗಿ
ದೇವರನ್ನು
ತೊರೆದು
ಬಿಟ್ಟರು.



ದೇವರು ಮಿದ್ಯಾನರ
ಮೂಲಕವಾಗಿ
ಇಸ್ರಾಯೆಲ್ಯರ ಹೊಲ,
ಗದ್ದೆ ಮನೆಗಳನ್ನು
ಸುಟ್ಟು ಹಾಕುವಂತೆ
ಮಾಡಿದನು.



ಇದರಿಂದ
ಇಸ್ರಾಯೆಲ್ಯರು
ಗುಹೆಗಳಲ್ಲಿ
ತಂಗುವರಾದರು.

ಗಿದ್ಯೋನನು ಮಿದ್ಯಾನ್ಯರಿಗೆ
ಗೊತ್ತಾಗದ ಹಾಗೆ ಅಲ್ಲಿನ
ದ್ರಾಕ್ಷೆಯ ಅಲೆಯ ಮರೆಯಲ್ಲಿ
ಗೋದಿಯನ್ನು

ಬಡಿಯುತ್ತಿದ್ದನು, ...





... ದೇವರು ಒಂದು
ಸಂದೇಶದೊಡನೆ ಗಿದ್ಯೋನನ
ಬಳಿಗೆ ದೇವದೂತನನ್ನು
ಕಳಿಸಿದನು.

ಗಿದ್ಯೋನನಿಗೆ ತನ್ನ ತಂದೆಯ ರೂಪದಲ್ಲಿ ಮಾಡಿದಂತ ಸುಳ್ಳು ದೇವರ ಸ್ವರೂಪವನ್ನು ನಾಶಪಡಿಸಿ ನಿಜ ದೇವರ ಯಜ್ಞವೇದಿಯನ್ನು ಮಾಡಬೇಕು ಎಂಬುವುದು ದೇವರ ಇಶ್ಟೇಯಾಗಿತ್ತು. ಆದರೆ ಆ ದೇಶದ ವ್ಯಕ್ತಿಗಳು ಅವನನ್ನು ಕೊಲ್ಲುವರೆಂದು ಅಂಜಿದನು. ಆದರೆ ದೇವರು ಅವನಿಗೆ ಆಜ್ಞಾಪಿಸಿದ್ದನ್ನೆ ಮಾಡಿದನು.



ಆ ದುಷ್ಟ ಮಿದ್ಯಾನ್ಯರ ಸೈನ್ಯಕ್ಕೆ ವಿರೋದವಾಗಿ ದೇವರು ಇಸ್ರೆಯೇಲ್ ಸೈನ್ಯವನ್ನು ಗಿದ್ಯೋನನೆ ನಡಸಬೇಕೆಂದು ದೇವರು ಬಯಸಿದನು.



ಆದರೆ ಗಿದ್ಯೋನನು ಭಯ ಪಟ್ಟು ದೇವರು ತನ್ನ ಸಂಗಡ ಇದ್ದಾನೆಂದು ತಿಳಿಯಲು ಒಂದು ಗುರುತನ್ನು ಕೇಳಿದನು, ನಂತರ ಕುರಿಯ ತುಪ್ಪಟದ ರಸವನ್ನು ನೆಲದ ಮೇಲೆ ಚೆಲ್ಲಿದನು.





ಆ ಗುರುತು

ಏನೇಂದರೆ

‘ನೆಲ ಒಣಗಿ

ತುಪ್ಪಟವು ಹಸಿಯಾಗಿರಲಿ

ಅದರಿಂದ ನಾನು ತಿಳಿದುಕೊಳ್ಳುತ್ತೆನೆ

ಇಸ್ರೆಯೇಲರನ್ನು ನೀನು ರಕ್ಷಿಸುತ್ತಿ’ ಎಂದು ಹೇಳಿ, ...



... ಮುಂಜಾನೆ
ನೋಡುವಾಗ
ನೆಲ
ಒಣಗಿತ್ತು
ತುಪ್ಪಟವು
ಹಸಿಯಾಗಿತ್ತು.
ದೇವರು ಅವನ ಮೂಲಕವಾಗಿ
ಇಸ್ರಾಯೆಲ್ಯರನ್ನು ಬಿಡಿಸುವನೆಂಬುದಾಗಿ
ಇದರಿಂದ ಆತನಿಗೆ ಗೊತ್ತಾಯಿತು.

ಆತನು ಪುನಃ ಅನುಮಾನಮಾಡಿ,
ದೇವರು ಮಂಜನ್ನು ನಲದ ಮೇಲೆ
ಹಾಕಿದನು ಆದರೆ ತುಪ್ಪಟದ
ಮೇಲೆ ಹಾಕಲಿಲ್ಲ ಮುಂಜಾನೆ
ನೋಡುವಾಗ ನೆಲ ಒಣಗಿತ್ತು
ತುಪ್ಪಟವು
ಹಸಿಯಾಗಿತ್ತು.



ಗಿದ್ಯೋನನು ೩೨೦೦೦ ಸೈನಿಕರನ್ನು ಒಟ್ಟು ಗೂಡಿಸಿದನು. ಆದರೆ ದೇವರು ೩೦೦ ಸೈನಿಕರನ್ನು ಮಾತ್ರ ಆರಿಸಿಕೊಂಡನು ಏಕೆಂದರೆ ಇಸ್ರಾಯೆಲ್ಯರು ಇದು ನಮ್ಮಿಂದ ಆಯಿತು ಎಂದು ಅಂದುಕೊಳ್ಳದೆ ಇದು ದೇವರಿಂದಲೇ ಆಯಿತು ಎಂದು ತಿಳಿಯುವಂತೆ ಮಾಡಿದನು.




ದೇವರು ಮಾತ್ರ ಇಸ್ರಾಯೆಲ್ಯರ ರಕ್ಷಕ.

ಗಿದ್ಯೋನನು ಇನ್ನೂ ಭಯ ಪಡುವವನೆಂದು ದೇವರು ತಿಳಿದು ಮಿದ್ಯಾನ್ಯರಿಗೆ ಒಂದು ಕನಸನ್ನು ಬೀಳುವಂತೆ ಮಾಡಿದನು ಅದೇನೆಂದರೆ ಒಂದು ...



... ಜವೆಗೋದಿಯ ರೊಟ್ಟಿ ಉರುಳುತ್ತ ಮಿದ್ಯಾನ್ಯರಿರುವ ಪಾಳೆಯಕ್ಕೆ ಬಂದು ಅವರನ್ನು ನಾಶಮಾಡುವಂತ ಒಂದು ಕನಸು ಬಿತ್ತು.





ಅಲ್ಲಿರುವ ವ್ಯಕ್ತಿ ಹೇಳುವುದೇನೆಂದರೆ ಇದು ಗಿದ್ಯೋನನ ಕತ್ತಿಯೆ ಎಂಬುವುದು ಈ ಕನಸಿನ ಅರ್ಥವಾಗಿದೆ., ದೇವರು ನಮಗೆ ವಿರೋದವಾಗಿ ಅವರಿಗೆ ಜಯವನ್ನು ಕೊಡುವವನಾಗಿದ್ದಾನೆಂದು ಗಿದ್ಯೋನನು ತಿಳಿದುಕೊಂಡನು.

ಗಿದ್ಯೋನನು ರಾತ್ರಿಯಲ್ಲಿ ಎಲ್ಲರಿಗೂ ಒಂದೊಂದು ಕೊಂಬುನ್ನು ಮತ್ತು ಒಂದೊಂದು



ಊರಿಯುವ ಪಂಜಡಗಿರುವ ಬರಿಕೊಡವನ್ನು ಕೊಟ್ಟು ಮಿದ್ಯಾನ್ಯರ ಸೈನೆದ ಸುತ್ತಲು ಅಕ್ರಮಿಸುವಂತೆ ತಿಳಿಸಿದನು.

ಗಿದ್ಯೋನನು ಆಜ್ಞೆ ಕೊಡಲು ಅವರು ಕೊಂಬುನ್ನು ಊದಿದರು ಪಂಜಡಗಿರುವ ಬರಿಕೊಡವನ್ನು ಒಡೆದರು ಅದರಿಂದ ಮಿದ್ಯಾನ್ಯರಲ್ಲಿ ಗಲಿಬಲಿಯಾಗಿ ಅವರು ಓಡಿ ಹೋದರು.



ಆ ಜಯವನ್ನು ಕಂಡ ಇಸ್ರಾಯೆಲ್ಯರು ಗಿದ್ಯೋನನಿಗೆ ನೀನೆ ನಮ್ಮ ಮೇಲೆ ದೊರೆಯಾಗಿರು ಎಂದು ಕೇಳಿಕೊಂಡರು.



ನಾನು ನಿಮ್ಮನ್ನು ಆಳುವುದಿಲ್ಲ, ಕರ್ತನೆ ನಿಮ್ಮನ್ನೇ ಆಳುತ್ತಾನೆ ಅಂದನು.



ದೇವರು ಮಾತ್ರವೇ ನಿಜವಾದ ಆಳ್ವಿಕೆಗಾರನೆಂದು ಗಿದ್ಯೋನನು ತಿಳಿದುಕೊಂಡಿದ್ದನು.



# ಗಿದ್ಯೋನನ ಸಣ್ಣ ಸೈನ್ಯ

ದೇವರ ವಾಕ್ಯವಾದ ಬೈಬಲ್‌ನಿಂದ ಆರಿಸಿದ ಕಥೆ

ಸಿಕ್ಕುವ ಭಾಗ

ನ್ಯಾಯ ಸ್ಥಾಪಕರು **6–8**

"ನಿನ್ನ ವಾಕ್ಯವಿವರಣೆಯಿಂದ ಜ್ಞಾನೋದಯವಾಗುವದು."

ಕೀರ್ತನೆ **119:130**

ಮುಕ್ತಾಯ

ಅದ್ಭುತನಾದ ದೇವರು ನಮ್ಮನ್ನು ಉಂಟು ಮಾಡಿರುವನೆಂದು ಮತ್ತು ನಾವು ಆತನನ್ನು ಕಂಡುಕೊಳ್ಳಬೇಕೆಂದು ದೇವರು ಇಷ್ಟಪಡುತ್ತಾನೆಂದು ಈ ಬೈಬಲ್ ಕಥೆಯು ತಿಳಿಸುತ್ತದೆ.

ನಾವು ಕೆಟ್ಟ ಕೆಲಸಗಳನ್ನು ಮಾಡಿರುವದು ದೇವರಿಗೆ ತಿಳಿದಿರುತ್ತದೆ. ಈ ಕೆಟ್ಟ ಕೆಲಸಗಳನ್ನು ದೇವರು ಪಾಪವೆಂದು ಕರೆಯುತ್ತಾನೆ. ಪಾಪದ ಶಿಕ್ಷೆಯು ಮರಣವಾಗಿದೆ. ಆದರೆ ನಮ್ಮ ಪಾಪದ ಶಿಕ್ಷೆಯನ್ನು ತನ್ನ ಮೇಲೆ ಹೊತ್ತುಕೊಂಡು ಶಿಲುಬೆಯ ಮೇಲೆ ಪ್ರಾಣ ಕೊಡಲು ದೇವರು ತನ್ನ ಒಬ್ಬನೇ ಮಗನಾದ ಯೇಸುಕ್ರಿಸ್ತನನ್ನು ಈ ಲೋಕಕ್ಕೆ ಕಳುಹಿಸಿಕೊಟ್ಟನು. ಯೇಸುಕ್ರಿಸ್ತನು ಸತ್ತವರೊಳಗಿಂದ ತಿರುಗಿ ಎದ್ದು ಬಂದು ಪರಲೋಕಕ್ಕೆ ಏರಿಹೋಗಿದ್ದಾನೆ. ನಿನ್ನ ಪಾಪದ ಶಿಕ್ಷೆಯನ್ನು ಯೇಸುಕ್ರಿಸ್ತನು ತೀರಿಸಿದ್ದಾನೆ. ಆತನು ನಿನ್ನ ಪಾಪಗಳನ್ನು ಕ್ಷಮಿಸುತ್ತಾನೆ. ಆದರೆ ನಿನ್ನ ಪಾಪಗಳನ್ನು ಕ್ಷಮಿಸಬೇಕೆಂದು ನೀನು ಆತನಿಗೆ ಕೇಳಿಕೊಳ್ಳಬೇಕು. ಆತನು ಖಂಡಿತವಾಗಿ ನಿನ್ನ ಪಾಪಗಳನ್ನು ಕ್ಷಮಿಸುವನು ಮತ್ತು ಈಗಲೇ ನಿನ್ನ ಹೃದಯದೊಳಗೆ ಬಂದು ವಾಸಿಸಬಲ್ಲನು! ನೀನು ಆತನೊಂದಿಗೆ ಯಾವಾಗಲೂ ಜೀವಿಸುವಿ.

ನೀನು ಈ ಸತ್ಯವನ್ನು
ನಂಬುವದಾದರೆ, ದೇವರಿಗೆ ಈ ಮಾತುಗಳನ್ನು ಹೇಳು:
ಕರ್ತನಾದ ಯೇಸುವೇ, ನೀನು ದೇವರು ಆಗಿರುವಿ ಎಂದು ಮತ್ತು ನನ್ನ ಪಾಪಕ್ಕಾಗಿ ನಿನ್ನ ಪ್ರಾಣವನ್ನು ಕೊಡಲು ಮನುಷ್ಯನಾಗಿ ಬಂದಿರುವಿ ಎಂದು ನಂಬುತ್ತೇನೆ. ಈಗ ನೀನು ಸತ್ತವರೊಳಗಿಂದ ಎದ್ದು ಬಂದು ಯಾವಾಗಲೂ ಜೀವಿಸುವವನಾಗಿರುವಿ, ನನ್ನ ಪಾಪಗಳನ್ನು ದಯವಿಟ್ಟು ಕ್ಷಮಿಸಿ ನನ್ನ ಹೃದಯದೊಳಗೆ ಬಂದು ವಾಸಿಸು. ಹೀಗೆ ಹೊಸ ಜೀವವನ್ನು ಪಡೆದುಕೊಂಡು ಒಂದು ದಿನ ನಾನು ನಿನ್ನ ಬಳಿಗೆ ಬಂದು ನಿನ್ನೊಂದಿಗೆ ಯಾವಾಗಲೂ ಇರುವೆನು. ನಿನಗೆ ವಿಧೇಯನಾಗುವದಕ್ಕೆ ಮತ್ತು ನಿನ್ನ ಮಗನಾಗಿ ಜೀವಿಸುವದಕ್ಕೆ ನನಗೆ ಸಹಾಯಮಾಡು.
ಆಮೆನ್.

ನೀನು ಪ್ರತಿದಿನವೂ ಬೈಬಲ್ ಓದು ಮತ್ತು ಪ್ರಾರ್ಥನೆಯಲ್ಲಿ
ದೇವರೊಂದಿಗೆ ಮಾತಾಡು!
ಯೋಹಾನ 3:16